# PAPER-II
# KANNADA

**Signature and Name of Invigilator**

1. (Signature) __________________________
   (Name) ____________________________
2. (Signature) __________________________
   (Name) ____________________________

OMR Sheet No. : ...............................................
(To be filled by the Candidate)

Roll No. | | | | | | | | |
(In figures as per admission card)

Roll No.________________________________
(In words)

**J 2 1 1 4**

Time : 1 $^1/_4$ hours] [Maximum Marks : **100**

Number of Pages in this Booklet : **8** Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** Ⓐ Ⓑ ● Ⓓ
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means such as change of response by scratching or using white fluid, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry original question booklet and duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण :** Ⓐ Ⓑ ● Ⓓ
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर मूल प्रश्न-पुस्तिका तथा OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

## KANNADA
## Paper – II

**Note :** This paper contains **fifty (50)** objective type questions of **two (2)** marks each. **All** questions are compulsory.

**ಏಕ ಆಯ್ಕೆ ಮಾದರಿಯ ಪ್ರಶ್ನೆಗಳು :**

**1.** ತ್ರಿಪದಿ ಛಂದಸ್ಸಿನಲ್ಲಿರುವ ಮೊಟ್ಟ ಮೊದಲ ಶಾಸನ
(A) ಹಲ್ಮಿಡಿ ಶಾಸನ
(B) ಬಾದಾಮಿ ಶಾಸನ
(C) ಬೊಪ್ಪಣನ ಗೊಮ್ಮಟಸ್ತುತಿ
(D) ತಮ್ಮಟಕಲ್ಲು ಶಾಸನ

**2.** 'ಮುಡಿಗೆಯ ಅಷ್ಟಕ' ಕೃತಿಯ ಕರ್ತೃ
(A) ಹರಿಹರ (B) ಕೆರೆಯ ಪದ್ಮರಸ
(C) ಸಿದ್ಧರಾಮ (D) ಚೆನ್ನಬಸವಣ್ಣ

**3.** 'ತೌಲನಿಕ ದ್ರಾವಿಡ ಭಾಷಾ ವ್ಯಾಕರಣ' ವನ್ನು ಬರೆದವರು
(A) ಇ.ಪಿ. ರೈಸ್ (B) ಕಿಟೆಲ್
(C) ಕಾಲ್ಡವೆಲ್ (D) ಫ್ಲೀಟ್

**4.** ಕನ್ನಡ ಭಾಷೆಯಲ್ಲಿ ವಿಷ್ಣು ಪುರಾಣ-ವನ್ನಾಧರಿಸಿ ಕಾವ್ಯ ರಚಿಸಿದವರು
(A) ನಾಗಚಂದ್ರ (B) ಜನ್ನ
(C) ಪೊನ್ನ (D) ರುದ್ರಭಟ್ಟ

**5.** 'ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ' ಈ ಸಾಲನ್ನು ಬರೆದ ಕವಿ
(A) ದ.ರಾ. ಬೇಂದ್ರೆ (B) ಕುವೆಂಪು
(C) ಪು.ತಿ.ನ. (D) ಚೆನ್ನವೀರ ಕಣವಿ

**6.** 'ಇಂದಿರಾಬಾಯಿ' ಕಾದಂಬರಿಯನ್ನು ಬರೆದವರು
(A) ಕೆರೂರು ವಾಸುದೇವಾಚಾರ್ಯ
(B) ಗುಲ್ವಾಡಿ ವೆಂಕಟರಾವ್
(C) ಬಿ. ವೆಂಕಟಾಚಾರ್ಯ
(D) ಗಳಗನಾಥ

**7.** 'ಕವಿ ಚರಿತೆಕಾರ' ರೆಂದು ಪ್ರಸಿದ್ಧರಾದವರು
(A) ಎಸ್.ಜಿ. ನರಸಿಂಹಾಚಾರ್
(B) ಪು.ತಿ. ನರಸಿಂಹಾಚಾರ್
(C) ಡಿ.ಎಲ್. ನರಸಿಂಹಾಚಾರ್
(D) ಆರ್. ನರಸಿಂಹಾಚಾರ್

**8.** ಎ.ಎನ್. ಮೂರ್ತಿರಾವ್ ಅವರ ಆತ್ಮ ಚರಿತ್ರೆ
(A) ಸಂಜೆಗಣ್ಣಿನ ಹಿನ್ನೋಟ
(B) ಸ್ಮೃತಿ ಪಟಲದಿಂದ
(C) ಹೋರಾಟದ ಬದುಕು
(D) ಭಾವ

**9.** 'ಧ್ವನಿಯು ಸೋತು ಗೆಲ್ಲುತ್ತದೆ' ಎಂದವರು
(A) ಬಿ.ಎಂ. ಶ್ರೀಕಂಠಯ್ಯ
(B) ಶ್ರೀಕಂಠೇಗೌಡ
(C) ತೀ.ನಂ. ಶ್ರೀಕಂಠಯ್ಯ
(D) ಶ್ರೀರಂಗ

**10.** 'ಭವ್ಯತೆ' ತತ್ವ ಪ್ರತಿಪಾದಕ
(A) ಕ್ರೋಚೆ
(B) ಲಾಂಜಿನಸ್
(C) ಐ.ಎ. ರಿಚರ್ಡ್ಸ್
(D) ಮ್ಯಾಥ್ಯೂ ಆರ್ನಾಲ್ಡ್

**11.** 'ಭರತನ ನಾಟ್ಯಶಾಸ್ತ್ರ' ದಲ್ಲಿ ಪ್ರತಿಪಾದಿಸಿದ ರಸಗಳ ಸಂಖ್ಯೆ
(A) ಆರು (B) ಒಂಬತ್ತು
(C) ಏಳು (D) ಎಂಟು

**12.** 'ಜನಪನಪಕೀರ್ತ್ಯಂಗನೆಗೆ ತುಡಿಸಿದನು ಭೂಷಣವ' ಇಲ್ಲಿರುವ ಅಲಂಕಾರ
(A) ರೂಪಕ (B) ಉತ್ಪ್ರೇಕ್ಷೆ
(C) ಉಪಮಾ (D) ಶ್ಲೇಷೆ

**13.** 'ನವ್ಯ ವಿಮರ್ಶೆ' ಪುಸ್ತಕವನ್ನು ಬರೆದವರು
(A) ಜಿ.ಎಸ್. ಆಮೂರ
(B) ಜಿ.ಎಚ್. ನಾಯಕ
(C) ಗಿರಡ್ಡಿ ಗೋವಿಂದರಾಜ
(D) ಕೀರ್ತಿನಾಥ ಕುರ್ತಕೋಟಿ

14. 'ಪ್ರಿನ್ಸಿಪಲ್ಸ್ ಆಫ್ ಲಿಟರರಿ ಕ್ರಿಟಿಸಿಸಮ್' ಗ್ರಂಥದ ಕರ್ತೃ
(A) ಕೋಲರಿಜ್
(B) ಆಯ್.ಎ. ರಿಚರ್ಡ್ಸ್
(C) ಎಜ್ರಾಪೌಂಡ
(D) ಎಫ್.ಆರ್. ಲೀವೀಸ್

15. 'ಮಾಸ್ತಿ' ಅವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟ ಕೃತಿ
(A) ಚೆನ್ನಬಸವ ನಾಯಕ
(B) ಶ್ರೀರಾಮ ಪಟ್ಟಾಭಿಷೇಕ
(C) ಯಶೋಧರ
(D) ಚಿಕವೀರ ರಾಜೇಂದ್ರ

16. 'ಎಣ್ದೆಸೆ' ಎಂಬುದು ಯಾವ ಸಮಾಸ
(A) ಬಹುವ್ರೀಹಿ (B) ಕರ್ಮಧಾರಯ
(C) ದ್ವಿಗು (D) ಅಂಶಿ

17. ಇದೊಂದು ಅನ್ಯದೇಶ್ಯ ಪದ
(A) ಗುಲಾಮ (B) ಕಡಲು
(C) ಮೀನು (D) ನೆಲ

18. ಭಾಷೆಯಲ್ಲಿ ಉಚ್ಚಾರದ ಅತಿ ಸಣ್ಣ ಘಟಕ
(A) ಆಕೃತಿಮಾ (B) ಧ್ವನಿಮಾ
(C) ಪ್ರಕೃತಿ (D) ಪ್ರತ್ಯಯ

19. 'ಈ ಕೆಲಸವನ್ನು ಮಾಡಿರಿ'- ಈ ವಾಕ್ಯದಲ್ಲಿರುವ ಕ್ರಿಯಾಪದ ಯಾವ ಅರ್ಥದಲ್ಲಿದೆ ?
(A) ಸಂಭಾವನಾರ್ಥಕ
(B) ಪ್ರೇರಣಾರ್ಥಕ
(C) ನಿಷೇಧಾರ್ಥಕ
(D) ವಿಧ್ಯರ್ಥಕ

20. 'ಕೇಳ್ದೊನ್' ಈ ಪದವು ಕನ್ನಡ ಭಾಷೆಯ ಯಾವ ಹಂತಕ್ಕೆ ಸೇರುತ್ತದೆ ?
(A) ಹಳಗನ್ನಡ
(B) ನಡುಗನ್ನಡ
(C) ಪೂರ್ವದ ಹಳಗನ್ನಡ
(D) ಹೊಸಗನ್ನಡ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

21. ಇವರು ಸಾಂಗತ್ಯ ಛಂದಸ್ಸಿನಲ್ಲಿ ಕಾವ್ಯವನ್ನು ರಚಿಸಿದ್ದಾರೆ.
(i) ಷಡಕ್ಷರಿ (ii) ಹೊನ್ನಮ್ಮ
(iii) ತಿರುಮಲಾರ್ಯ (iv) ಕನಕದಾಸ
ಇವುಗಳಲ್ಲಿ ಸರಿಯಾದ ಉತ್ತರ :
(A) (i) ಮತ್ತು (ii) (B) (ii) ಮತ್ತು (iii)
(C) (iii) ಮತ್ತು (iv) (D) (ii) ಮತ್ತು (iv)

22. ಇವರು ರಾಜಾಶ್ರಯದಲ್ಲಿದ್ದು ಕೃತಿಗಳನ್ನು ರಚಿಸಿದವರು
(i) ಪಂಪ ಮತ್ತು ರನ್ನ
(ii) ಪೊನ್ನ ಮತ್ತು ಚಾವುಂಡರಾಯ
(iii) ಹರಿಹರ ಮತ್ತು ಬಸವಣ್ಣ
(iv) ಲಕ್ಷ್ಮೀಶ ಮತ್ತು ಮುದ್ದಣ
ಇವುಗಳಲ್ಲಿ ಸರಿಯಾದ ಉತ್ತರ :
(A) (i) ಮತ್ತು (ii) (B) (i) ಮತ್ತು (iii)
(C) (ii) ಮತ್ತು (iii) (D) (iii) ಮತ್ತು (iv)

23. ಇವು ಅನ್ಯ ಭಾಷಾ ಸಾಹಿತ್ಯ ಪ್ರೇರಣೆಯಿಂದ ಮೂಡಿ ಬಂದ ಕೃತಿಗಳು.
(i) ಬಿರುಗಾಳಿ ಮತ್ತು ಅಶ್ವತ್ಥಾಮನ್
(ii) ಕರ್ನಾಟಕ ಕಾದಂಬರಿ ಮತ್ತು ರಾಮಚಂದ್ರ ಚರಿತ ಪುರಾಣ
(iii) ಸಿದ್ಧರಾಮ ಚಾರಿತ್ರ ಮತ್ತು ಕುಮಾರರಾಮನ ಸಾಂಗತ್ಯ
(iv) ರಾಜಾವಳಿ ಕಥೆ ಮತ್ತು ರಾಮಧಾನ್ಯಚರಿತೆ
ಇವುಗಳಲ್ಲಿ ಸರಿಯಾದ ಉತ್ತರ :
(A) (i) ಮತ್ತು (iii) (B) (i) ಮತ್ತು (ii)
(C) (ii) ಮತ್ತು (iii) (D) (iii) ಮತ್ತು (iv)

24. ಬಸವಣ್ಣನವರ ಜೀವನವು ವಸ್ತುವಾಗಿರುವ ನಾಟಕಗಳು
(i) ಕಾಕನ ಕೋಟೆ ಮತ್ತು ಕೆಟ್ಟಿತ್ತು ಕಲ್ಯಾಣ
(ii) ಬಂಡ್ವಾಳ್ವಿಲ್ಲದ ಬಡಾಯಿ ಮತ್ತು ಜಗಜ್ಯೋತಿ ಬಸವೇಶ್ವರ
(iii) ತಲೆದಂಡ ಮತ್ತು ಮಹಾಚೈತ್ರ
(iv) ಸಂಕ್ರಾಂತಿ ಮತ್ತು ಶಿವರಾತ್ರಿ
ಇವುಗಳಲ್ಲಿ ಸರಿಯಾದ ಉತ್ತರ :
(A) (ii) ಮತ್ತು (iii) (B) (iii) ಮತ್ತು (iv)
(C) (i) ಮತ್ತು (iii) (D) (ii) ಮತ್ತು (iv)

25. ಇವು ಅನುವಾದಿತ ಕೃತಿಗಳು
(i) ದುರ್ಗೇಶನಂದಿನಿ - ಯಮುನಾ ಪರ್ಯಟನ
(ii) ಹಮ್ಮು ಮತ್ತು ಬಿಮ್ಮು- ಕರ್ವಾಲೊ
(iii) ಇಂಗ್ಲಿಷ್ ಗೀತೆಗಳು- ಬಂಡಾಯ
(iv) ಕೆಂಪು ಮೀನು- ತಾಯಿ
ಇವುಗಳಲ್ಲಿ ಸರಿಯಾದ ಉತ್ತರ :
(A) (ii) ಮತ್ತು (iv) (B) (i) ಮತ್ತು (iii)
(C) (i) ಮತ್ತು (iv) (D) (i) ಮತ್ತು (ii)

26. ಇವು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು.
(i) ಗುಣೀಭೂತ ವ್ಯಂಗ್ಯ ಮತ್ತು ಸಾಧಾರಣೀಕರಣ
(ii) ಪರಂಪರೆ ಮತ್ತು ವ್ಯಕ್ತಿ ಪ್ರತಿಭೆ
(iii) ವ್ಯಕ್ತಿತ್ವ ನಿರಸನ
(iv) ಸ್ವಭಾವೋಕ್ತಿ
ಇವುಗಳಲ್ಲಿ ಸರಿಯಾದ ಉತ್ತರ :
(A) (ii) ಮತ್ತು (iv) (B) (iii) ಮತ್ತು (iv)
(C) (ii) ಮತ್ತು (iii) (D) (i) ಮತ್ತು (ii)

27. ಇವು ಕನ್ನಡ ವಿಭಕ್ತಿ ಪ್ರತ್ಯಯಗಳು.
(i) ತನ (ii) ಗಳು
(iii) ಅನ್ನು (iv) ಗೆ
ಇವುಗಳಲ್ಲಿ ಸರಿಯಾದ ಉತ್ತರ :
(A) (iii) ಮತ್ತು (iv) (B) (iii) ಮತ್ತು (ii)
(C) (ii) ಮತ್ತು (iv) (D) (i) ಮತ್ತು (ii)

28. ಇವು ತದ್ಭವ ಪದಗಳು
(i) ಸರಸ್ವತಿ ಮತ್ತು ಕಮಲ
(ii) ಮಿಗ ಮತ್ತು ಮೊಗ
(iii) ಆಗಸ ಮತ್ತು ಲಕುಮಿ
(iv) ಯಜ್ಞ ಮತ್ತು ಸೊನ್ನೆ
ಇವುಗಳಲ್ಲಿ ಸರಿಯಾದ ಉತ್ತರ :
(A) (i) ಮತ್ತು (ii) (B) (ii) ಮತ್ತು (iv)
(C) (iii) ಮತ್ತು (iv) (D) (ii) ಮತ್ತು (iii)

29. ಇವು ಅರ್ಥಾಂತರಕ್ಕೆ ಉದಾಹರಣೆಗಳು.
(i) ಅಮ್ಮ ಮತ್ತು ಅಸಹ್ಯ
(ii) ಮರ್ಯಾದೆ ಮತ್ತು ಖಂಡಿತ
(iii) ಎಣ್ಣೆ ಮತ್ತು ಸೀರೆ
(iv) ಶ್ರಾದ್ಧ ಮತ್ತು ಪೆದ್ದ
ಇವುಗಳಲ್ಲಿ ಸರಿಯಾದ ಉತ್ತರ :
(A) (ii) ಮತ್ತು (iii) (B) (ii) ಮತ್ತು (iv)
(C) (iii) ಮತ್ತು (iv) (D) (i) ಮತ್ತು (ii)

30. ಇವು ಪುರುಷವಾಚಕ ಸರ್ವನಾಮಗಳು
(i) ನಾನು ಮತ್ತು ನೀನು
(ii) ಅವಳು ಮತ್ತು ಅವರು
(iii) ತಾನು ಮತ್ತು ಅವನು
(iv) ಯಾವುದು ಮತ್ತು ಯಾರು ?
ಇವುಗಳಲ್ಲಿ ಸರಿಯಾದ ಉತ್ತರ :
(A) (iv) ಮತ್ತು (i) (B) (i) ಮತ್ತು (ii)
(C) (ii) ಮತ್ತು (iii) (D) (iii) ಮತ್ತು (iv)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ. (31ನೇ ಪ್ರಶ್ನೆಯಿಂದ 35ನೆಯ ಪ್ರಶ್ನೆಯವರೆಗೆ)

ಅಂತಪ್ಪೊಡೆ ಮಕ್ಕಳಿರಾ ಮಗಧೆಯೆಂಬುದು ನಾಡಲ್ಲಿ ರಾಜಗೃಹಮೆಂಬುದು ಪೊೞಲದನಾಳ್ವೊಂ ಸುಬಲ-ನೆಂಬರಸನಾತನ ಮಹಾದೇವಿ ಸುಪ್ರಭೆಯೆಂಬೊಳ-ವರ್ಗ್ಗೆ ಮಂತ್ರಿಯೆಮ್ಮಣ್ಣಂ ಸೂರ್ಯಮಿತ್ರನೆಂಬೊಂ ಎಲ್ಲಾ ಓದುಗಳುಮಂ ಬಲ್ಲೊನಾತಂ ನಿಮ್ಮ ನೋದಿಸಿ

ಯೋಗ್ಯರಂ ಮಾಡುವಂತಿರೆ ನಿರೂಪಿಸಿ ಕಲ್ಲಿಸಿ-ಯೋಲೆಯಂ ಬರೆಯಿಸಿ ನಿಮ್ಮ ಕಯ್ಯೊಳಟ್ಟಿದಪೆಂ ನೀಮುಂ ಪೋಗಿ ನಿಮ್ಮ ಮಾವನ ಪಕ್ಕದೊಳೋದಿ-ಮೆಂದೋಲೆಯಂ ಬರೆಯಿಸಿ ಕೊಟ್ಟೊಡವರ್ಗ್ಗಳುಂ ತಾಯಂ ಬೀಱ್ಕೊಂಡು ಕತಿಪಯ ದಿವಸಂಗಳಿಂ ರಾಜಗೃಹಮನೆಯ್ದಿ ಸೂರ್ಯಮಿತ್ರನ ಮನೆಯಂ ಬೆಸಗೊಂಡು ಪೋಗಿ ಕಂಡೋಲೆಯನಿಕ್ಕಿದೊಡೆ ಸೂರ್ಯಮಿತ್ರನೆಲ್ಲಿಂ ಬಂದಿರಾರೋಲೆಯೆಂದು ಬೆಸ-ಗೊಂಡೊಡೆ-ಕೌಸಂಬಿಯಿಂ ಬಂದೆವು ನಿಮ್ಮ ತಂಗೆ-ಯಪ್ಪ ಕಾಶ್ಯಪಿಯಟ್ಟಿದೋಲೆಯೆಂದೊಡೋಲೆಯಂ ಬಾಜಿಸಿ ನೋಡಿ ಸೋಮಶ್ಮರಂ ಕಱಿದುದುಮಂ ಮಂತ್ರಿಪದವಿ ಪೆಱರ್ಗ್ಗಾದುದುಮಂ ಮಕ್ಕಳ್ ಸಪ್ತವ್ಯಸನಾಭಿಭೂತಾರಾಗಿ ಬಾೞಿಂ ಕೆಟ್ಟುದುಮಂ ಶಾಸ್ತ್ರಜ್ಞರುಂ ಬುದ್ಧಿಯೊಡೆಯರುಂ ಯೋಗ್ಯರು-ಮಪ್ಪಂತು ಮಾಡಿಮೆಂದು ಮಕ್ಕಳಂ ತನಗೆ ನಿರೂಪಿಸಿಯಟ್ಟಿದುದುಮನಿಂತಿವೆಲ್ಲಂ ಬಾಜಿಸಿ ನೋಡಿ-ಇವಂದಿರ್ಗ್ಗೆ ಪಸರಂಗೊಟ್ಟೆನಪ್ಪೊಡೆ ಮುನ್ನಿ-ನಂತುರ್ಕಿ ಕಿಡುವರೆಂದು ಮನದೆ ಬಗೆದಗ್ನಿಭೂತಿ ವಾಯುಭೂತಿಗಳ್ಗಿಂತೆಂದಂ-ಕಾಶ್ಯಪಿಯೆಂಬೊಳೆನಗೆ ತಂಗೆಯಿಲ್ಲ ಸೋಮಶರ್ಮನೆಂಬೊಂ ಮಯ್ದುನನು-ಮಿಲ್ಲ ಸೂರ್ಯಮಿತ್ರನೆಂಬ ಪೆಸರೆನಗುಂಟು ನಿಮ್ಮ ಮಾವನಪ್ಪ ಸೂರ್ಯಮಿತ್ರನಲ್ಲೆನೆಂದವರ್ಗ್ಗೆ ನುಡಿದುಂ ಮತ್ತಮಿಂತೆಂದಂ ನೀಮಾರ್ಗ್ಗಾರಾದೊಡಮೇಂ ವಿದ್ಯಾರ್ಥಿಗಳಾಗಿಯೋದಂ ಕಲ್ವೆಮೆಂಬಟ್ಟಿಯೊಳ್ ಬಂದಿರಪ್ಪೊಡೆ ಬೈಕಂದಿರಿದು ಕಪ್ಪಡಮುಟ್ಟಿರುಳುಂ ಪಗಲುಮಲಸದೆ ನಿರ್ಬಂಧದಿಂದೋದಲಾರ್ಪೊಡೆ ನಿಮ್ಮ ನೋದಿಸಲಕ್ಕುಮೆಂದೊಡವರ್ಗಳುಮಿಂದಯೆ-ಗೆಯ್ಯಿಂ ಮಹಾಪ್ರಸಾದಮೆಂದು ಪೊಡೆಮಟ್ಟು ಹರ್ಷಚಿತ್ತರಾಗಿ ಒಳಿತಪ್ಪ ದಿವಸ ವಾರ ವಿದ್ಯಾ-ನಕ್ಷತ್ರದಂದು ತಮ್ಮನುಕೂಲದೊಳೋಜರ್ಗ್ಗೆಱಗಿ ಪೊಡೆವಟ್ಟು ವಿದ್ಯಾಪ್ರಾರಂಭಂಗೆಯ್ದರ್ ಸೂರ್ಯ-ಮಿತ್ರನುಮವರನಿರುಳಂ ಪಗಲುಂ ನಿರಂತರಂ ನಿರ್ಬಂಧದಿಂದೋದಿಸಿ ಪಱಿಂಟು ವರುಷದಿಂದೊಳಗೆ ನಾಲ್ಕು ವೇದುಮುಮಾಱಂಗಮುಂ ಪದಿನೆಂಟು ಧರ್ಮಶಾಸ್ತ್ರಂಗಳುಂ ಮೀಮಾಂಸಾ ನ್ಯಾಯವಿಸ್ತರಂ ವ್ಯಾಕರಣಂ ಪ್ರಮಾಣಂ ಛಂದಮಲಂಕಾರಂ ನಿಘಂಟು ಕಾವ್ಯನಾಟಕಂಗಳುಂ ಚಾಣಕ್ಯಂ ಸಾಮುದ್ರಿಕಂ ಶಾಲಿಹೋತ್ರಂ ಪಾಳಕಾವ್ಯಂ ಹಾನಿತಂ ಚರಕಮಶ್ವಿನೀಮತಂ ಬಾಹಲಂ ಸುಸ್ರುತಂ ಕ್ಷಾರ-ಪಾನೀಯಂ ಮೊದಲಾಗೊಡೆಯ ನರವೈದ್ಯಂಗಳುಂ ಜ್ಯೋತಿಷಂ ಮಂತ್ರವಾದಂ ಮೊದಲಾಗೊಡೆಯ ಶಾಸ್ತ್ರಗಳೆಲ್ಲಮಂ ನೆಱೆಯೆ ಕಲ್ಪಿಸಿ ಯೋಗ್ಯರ್ ಮಾಡಿ-ದೊಡವರ್ ನಿಮ್ಮ ಪ್ರಸಾದದಿಂದೆಲ್ಲಾ ಶಾಸ್ತ್ರಮಂ ಕಲ್ತು ಪಂಡಿತರೆಮಾದೆಮೆಂದಾದಮಾನು ಮೊಸೆ-ದುಮಿನ್ನೆಮ್ಮ ನಾಡ್ಗೆ ಪೋದಪೆಮೆಂದೋಜರ್ಗೆಱಗಿ ಪೊಡೆವಟ್ಟು ಬೀಱ್ಕೊಂಡಾಗಳೋಜರೆಂದರ್-ನೀಮೆಮ್ಮ ತಂಗೆಯ ಮಕ್ಕಳಿರ್ ಸೋದರಳಿ-ಯಂದಿರಪ್ಪಿರ್ ನಿಮಗಾಂ ಪಸರಂಗೊಟ್ಟೆನಿಲ್ಲೇ-ಕೆಂದೊಡೆ ಮುನ್ನಿನಂತೆ ತಂದೆಯಲ್ಲಿಯುರ್ಕ್ಕಿ ಕೆಟ್ಟಂತಿರಿಲ್ಲಿ ಯುಮೆತ್ತಾನುಮುರ್ಕ್ಕಿ ಕಿಡುವಿರೆಂದಾಂ ನಿಮ್ಮಂ ಯೋಗ್ಯರಂ ಮಾಡುವ ಕಾರಣಮಾಗಿ ನಿಮಗೆ ಪಸರಂಗೊಟ್ಟೆ ನಿಲ್ಲಿದರ್ಕ್ಕೆ ಮುಳಿಯದಿರಿಂ ಕ್ಷಮಿಯಿಸಿಮೆಂದುಡಲುಂ ತುಡಲುಂ ಸಂಬಳ-ಮುಮಂ ಕೊಟ್ಟು ಕಱಿಪಿದಾಗಳ್.

**31.** ಈ ಗದ್ಯ ಭಾಗದ ಪ್ರಧಾನ ಆಶಯ

(A) ಯೋಗ್ಯ ಗುರು ದೊರೆತರೆ ಅಯೋಗ್ಯರೂ ಯೋಗ್ಯರಾಗುತ್ತಾರೆ

(B) ಸೊಕ್ಕಿದವರಿಗೆ ಶಿಕ್ಷಣ ನೀಡಬಾರದು

(C) ರಕ್ತ ಸಂಬಂಧಿಗಳಿಗೆ ಶಿಕ್ಷಣ ನೀಡಬಾರದು

(D) ಶಿಕ್ಷಣ ಪಡೆಯಲು ರಾಜಾಶ್ರಯ ಅಗತ್ಯ

**32.** ವಾಯು ಭೂತಿಯ ತಂದೆಯ ಹೆಸರು

(A) ಅಗ್ನಿ ಭೂತಿ (B) ಸೂರ್ಯ ಮಿತ್ರ

(C) ಸೋಮಶರ್ಮ (D) ಚಾಣಕ್ಯ

**33.** ಸೂರ್ಯಮಿತ್ರನು ಅಳಿಯಂದಿರ ಬಂಧುತ್ವ-ವನ್ನು ಮರೆ ಮಾಚಲು ಕಾರಣವೇನು ?

(A) ಅಳಿಯಂದಿರು ರಾಜ್ಯ ಕೇಳಬಹು-ದೆಂಬ ಶಂಕೆ

(B) ಅವರ ಖರ್ಚು ವೆಚ್ಚಗಳನ್ನುಳಿಸಲೆಂದು

(C) ಅವರಿಗೆ ವಿದ್ಯೆ ಕಲಿಸುವ ಮನಸ್ಸಿಲ್ಲದ್ದು

(D) ಅವರು ಮೊದಲಿನಂತೆ ಗರ್ವವನ್ನು ಹೊಂದಿ ಕೆಡಬಹುದೆಂಬ ಹೆದರಿಕೆ

**34.** ಸುಬಲರಾಜನ ಆಳ್ವಿಕೆಗೆ ಒಳಪಟ್ಟ ಪಟ್ಟಣ

(A) ರಾಜಗೃಹ (B) ಮಗಧ

(C) ಕೌಸಂಬಿ (D) ಉಜ್ಜಯಿನಿ

35. ಸುಪ್ರಭೆಯು ಮಕ್ಕಳನ್ನು ಮಗಧ ನಾಡಿಗೆ ಕಳುಹಿಸಿದ ಉದ್ದೇಶ
(A) ವಿದ್ಯೆ ಕಲಿಯಲೆಂದು
(B) ಮದುವೆಯಾಗಲೆಂದು
(C) ರಾಜ್ಯ ಸಂಪಾದಿಸಲೆಂದು
(D) ಯುದ್ಧ ಮಾಡಲೆಂದು

**ಹೇಳಿಕೆ-ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

36. ಹೇಳಿಕೆ : 'ಶಿರದಲೊಪ್ಪುವ ನೀಲಕುಂತಳಕೆ ಶರಣು'
ವಿವರಣೆ : ತಲೆಯ ಮೇಲಿರುವ ಕಪ್ಪುಕೇಶಕ್ಕೆ ನಮಸ್ಕಾರ
(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ಸರಿ, ವಿವರಣೆ ತಪ್ಪು
(C) ಹೇಳಿಕೆ ತಪ್ಪು, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

37. ಹೇಳಿಕೆ : 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು'
ವಿವರಣೆ : ವೀರರ ಹೋರಾಟದಲ್ಲಿ ನಡುವೆ ಇರುವವರೆಗೆ ಸಾವಿಲ್ಲ.
(A) ಹೇಳಿಕೆ ಸರಿ, ವಿವರಣೆ ಸರಿ
(B) ಹೇಳಿಕೆ ತಪ್ಪು, ವಿವರಣೆ ತಪ್ಪು
(C) ಹೇಳಿಕೆ ಸರಿ, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

38. ಹೇಳಿಕೆ : ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ ?
ವಿವರಣೆ : ಹೂವಾಡಿಗಿನ ಹೊಸ ಹೂವಿನ ಮಾಲೆಯನ್ನು ಧರಿಸುವ ಮಹಿಳೆಯ-ರಿಲ್ಲದಿದ್ದರೂ ಮಾಲೆಗಾರನಿಗೇನೂ ನಷ್ಟವಿಲ್ಲ.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ತಪ್ಪು, ವಿವರಣೆ ಸರಿ
(C) ಹೇಳಿಕೆ ಸರಿ, ವಿವರಣೆ ಸರಿ
(D) ಹೇಳಿಕೆ ತಪ್ಪು, ವಿವರಣೆ ತಪ್ಪು

39. ಹೇಳಿಕೆ : 'ಕವಿತೆಯೊಳಾಸೆಗೆಯ್ವ ಫಲಮಾವು-ದೊಪೂಜೆ, ನೆಗಳ್ತೆ, ಲಾಭಂ'
ವಿವರಣೆ : ಕಾವ್ಯರಚನೆಯಿಂದ ಗೌರವ, ಕೀರ್ತಿ ಹಾಗೂ ಸಂಪತ್ತು ಲಭಿಸುತ್ತದೆ.
(A) ಹೇಳಿಕೆ ಸರಿ, ವಿವರಣೆ ತಪ್ಪು
(B) ಹೇಳಿಕೆ ಸರಿ, ವಿವರಣೆ ಸರಿ
(C) ಹೇಳಿಕೆ ತಪ್ಪು, ವಿವರಣೆ ತಪ್ಪು
(D) ಹೇಳಿಕೆ ತಪ್ಪು, ವಿವರಣೆ ಸರಿ

40. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?
(A) ದುರ್ಗಸಿಂಹ – ಶಾಂತಿಪುರಾಣ
(B) ನೇಮಿಚಂದ್ರ – ಲೀಲಾವತಿ ಪ್ರಬಂಧ
(C) ಬ್ರಹ್ಮಶಿವ – ಧರ್ಮಾಮೃತ
(D) ಕೇಶಿರಾಜ – ಭಾಷಾಭೂಷಣ

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?
(A) ಭೀಮಕವಿ – ಬಸವಪುರಾಣ
(B) ಸಿಂಗರಾರ್ಯ – ಮಿತ್ರವಿಂದ ಗೋವಿಂದ
(C) ದೇಪರಾಜ – ಸೊಬಗಿನ ಸೋನೆ
(D) ಚಾಮರಸ – ಶಿವತತ್ತ್ವ ಚಿಂತಾಮಣಿ

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?
(A) ಮುಳಿಯ ತಿಮ್ಮಪ್ಪಯ್ಯ – ನಾಡೋಜ ಪಂಪ
(B) ಎಂ. ಚಿದಾನಂದಮೂರ್ತಿ – ಚಪ್ಪಲಿಗಳು
(C) ಸಾರಾ ಅಬೂಬಕ್ಕರ್ – ಹೊಸತು-ಹೊಸತು
(D) ಪೂರ್ಣಚಂದ್ರ ತೇಜಸ್ವಿ – ಅಪೂರ್ವ ಪಶ್ಚಿಮ

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುವುದಿಲ್ಲ ?
(A) ಭಾಮಹ – ಕಾವ್ಯಾಲಂಕಾರ
(B) ವಾಮನ – ಸಾಹಿತ್ಯ ದರ್ಪಣ
(C) ಮಮ್ಮಟ – ಕಾವ್ಯ ಪ್ರಕಾಶ
(D) ಜಗನ್ನಾಥ ಪಂಡಿತ – ರಸ ಗಂಗಾಧರ

**44.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಕುವೆಂಪು – ಪಕ್ಷಿಕಾಶಿ
(B) ಶಿವರುದ್ರಪ್ಪ – ಹೇಳತೇನ ಕೇಳ
(C) ಪು.ತಿ.ನ. – ನನ್ನ ನಲ್ಲ
(D) ದಿನಕರ ದೇಸಾಯಿ – ಹಣತೆ

**45.** ಬಹು ಆಯ್ಕೆಯ ಜೋಡಣೆ

| | |
|---|---|
| a. ತರಾಸು | i. ಹೆಬ್ಬೆರಳು |
| b. ತ್ರಿವೇಣಿ | ii. ಭೂಮಿಗೀತ |
| c. ಗೋಪಾಲಕೃಷ್ಣ ಅಡಿಗ | iii. ಶರಪಂಜರ |
| d. ಗೋವಿಂದ ಪೈ | iv. ಶಿಲ್ಪ ಶ್ರೀ |

ಇದಕ್ಕೆ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | iv | iii | ii | i |
| (B) | i | iii | ii | iv |
| (C) | iv | ii | iv | iii |
| (D) | iii | ii | iv | i |

**46.** ಬಹು ಆಯ್ಕೆಯ ಜೋಡಣೆ

| | |
|---|---|
| a. ಕಂದ | i. ಹರಿಕಥಾಮೃತಸಾರ |
| b. ಭಾಮಿನಿ ಷಟ್ಪದಿ | ii. ಭರತೇಶ ವೈಭವ |
| c. ಸಾಂಗತ್ಯ | iii. ಸೋಮನಾಥ ಚರಿತೆ |
| d. ವಾರ್ಧಕ ಷಟ್ಪದಿ | iv. ಪಂಪಾಶತಕ |
| | v. ಯಶೋಧರ ಚರಿತೆ |

ಇದಕ್ಕೆ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | v | ii | iv | iii |
| (B) | v | i | ii | iii |
| (C) | ii | iii | v | i |
| (D) | iv | i | iii | ii |

**47.** ಬಹು ಆಯ್ಕೆಯ ಜೋಡಣೆ

| | |
|---|---|
| a. ಮರಣವೇ ಮಹಾನವಮಿ | i. ಪುರಂದರದಾಸ |
| b. ನೀ ಕೇಳಿದರೆ ಕೇಳು ಕೇಳದಿದ್ದರೆ ಮಾಣು | ii. ವಾದಿರಾಜ |
| c. ಧರ್ಮವೇ ಜಯವೆಂಬ ದಿವ್ಯಮಂತ್ರ | iii. ಬಸವಣ್ಣ |
| d. ತಲ್ಲಣಿಸದಿರು ಕಂಡ್ಯ ತಾಳು ಮನವೆ | iv. ಅಕ್ಕಮಹಾದೇವಿ |
| | v. ಕನಕದಾಸ |

ಇದಕ್ಕೆ ಸರಿಯಾದ ಉತ್ತರ :

| | a | b | c | d |
|---|---|---|---|---|
| (A) | iii | v | iv | ii |
| (B) | ii | iii | i | iv |
| (C) | v | i | ii | iii |
| (D) | iii | iv | i | v |

**ಅನುಕ್ರಮ ಮಾದರಿ :**

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿರಿ.

**48.** (A) ಮುದ್ರಾಮಂಜೂಷ, ಪುಷ್ಪರಗಳೆ, ಚಾವುಂಡರಾಯ ಪುರಾಣ, ರಾಮಚಂದ್ರ ಚರಿತ ಪುರಾಣ

(B) ರಾಮಚಂದ್ರ ಚರಿತ ಪುರಾಣ, ಪುಷ್ಪರಗಳೆ, ಚಾವುಂಡರಾಯ ಪುರಾಣ, ಮುದ್ರಾಮಂಜೂಷ

(C) ಚಾವುಂಡರಾಯ ಪುರಾಣ, ರಾಮಚಂದ್ರ ಚರಿತ ಪುರಾಣ, ಪುಷ್ಪರಗಳೆ, ಮುದ್ರಾಮಂಜೂಷ

(D) ಗಿರಿಜಾ ಕಲ್ಯಾಣ, ಮುದ್ರಾಮಂಜೂಷ, ರಾಮಚಂದ್ರ ಚರಿತ ಪುರಾಣ, ಪುಷ್ಪರಗಳೆ

**49.** (A) ಉತ್ತಂಗಿ ಚೆನ್ನಪ್ಪ, ಮಧುರಚೆನ್ನ, ಬಸವರಾಜ ಕಟ್ಟೀಮನಿ, ಜೀ.ಶಂ. ಪರಮಶಿವಯ್ಯ

(B) ಮಧುರಚೆನ್ನ, ಜೀ.ಶಂ. ಪರಮಶಿವಯ್ಯ, ಉತ್ತಂಗಿ ಚೆನ್ನಪ್ಪ, ಬಸವರಾಜ ಕಟ್ಟೀಮನಿ

(C) ಜೀ.ಶಂ. ಪರಮಶಿವಯ್ಯ, ಮಧುರಚೆನ್ನ, ಉತ್ತಂಗಿ ಚೆನ್ನಪ್ಪ, ಬಸವರಾಜ ಕಟ್ಟೀಮನಿ

(D) ಬಸವರಾಜ ಕಟ್ಟೀಮನಿ, ಮಧುರಚೆನ್ನ, ಉತ್ತಂಗಿ ಚೆನ್ನಪ್ಪ, ಜೀ.ಶಂ. ಪರಮಶಿವಯ್ಯ

**50.** (A) ಕಾಡು, ಶಾಪ, ಮಾಡಿದ್ದುಣ್ಣೊ ಮಹಾರಾಯ, ಹೊನ್ನಿಯ ಮದುವೆ

(B) ಶಾಪ, ಮಾಡಿದ್ದುಣ್ಣೊ ಮಹಾರಾಯ, ಹೊನ್ನಿಯ ಮದುವೆ, ಕಾಡು.

(C) ಮಾಡಿದ್ದುಣ್ಣೊ ಮಹಾರಾಯ, ಕಾಡು, ಶಾಪ, ಹೊನ್ನಿಯ ಮದುವೆ

(D) ಮಾಡಿದ್ದುಣ್ಣೊ ಮಹಾರಾಯ, ಹೊನ್ನಿಯ ಮದುವೆ, ಶಾಪ, ಕಾಡು

**Space For Rough Work**